




ಸಿಂಗಾತಂ ಕಟ್ಟಡಗಳು





ತೇನ್‌ಸಿಂಗ್ ನೋರ್ಗೆ ಸಮಾಧಿ

ನೆಲ ಅಂತಸ್ತಿನ ಒಳಗೆ ಪ್ರವೇಶಿಸಿದ ಹಾಗೆ, ಬೃಹತ್ತಾದ ಹಿಮಾಲಯನ್ ಪರ್ವತ ಶ್ರೇಣಿಯ ಪಶ್ಚಿಮದಿಂದ ಪೂರ್ವದವರೆಗೆ ಹಬ್ಬಿಕೊಂಡಿರುವ ಪ್ರತಿಕೃತಿ ಕಣ್ಣಿಗೆ ಬೀಳುತ್ತದೆ. ಹಿಮಾಲಯದ ಬಗ್ಗೆ ಬಹಳಷ್ಟು ಮಾಹಿತಿ ಸಿಗುತ್ತದೆ. ಹಿಮಾಲಯದಲ್ಲಿ ಹುಟ್ಟುವ ನದಿಗಳನ್ನು ಮತ್ತು ಪರ್ವತ ಶ್ರೇಣಿಗಳನ್ನು, ಅದರ ಎತ್ತರಗಳನ್ನು ಕೂಡಾ ಪ್ರತಿಕೃತಿಯಲ್ಲಿ ನಮೂದಿಸಿದ್ದಾರೆ.

ಡಾರ್ಜಿಲಿಂಗ್ ಮೌಂಟ್ ಎವರೆಸ್ಟ್ ಮತ್ತು ಕಾಂಚನಜುಂಗ ಪರ್ವತಗಳ ಮಧ್ಯೆ ಇರುವುದರಿಂದ ಇಲ್ಲಿ ವ್ಯತಿರಿಕ್ತವಾದ ಹವಾಮಾನವಿದೆ. ಈ ಮ್ಯೂಸಿಯಂನಲ್ಲಿ ಪರ್ವತಾರೋಹಿಗಳು ಬಳಸುವ ಜಾಕೆಟ್, ಶೂಗಳು, ಟೆಂಟ್, ಹಿಮವನ್ನು ತುಂಡು ಮಾಡುವ ಸಲಕರಣೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ಹಿಮಾಲಯದಲ್ಲಿ ಸಿಗುವಂತಹ ಬಗೆ ಬಗೆಯ ಕಲ್ಲುಗಳು ಗಮನ ಸೆಳೆದವು. ಹಿಮಾಲಯನ್ ಜನರ ಉಡುಗೆ ತೊಡುಗೆಗಳು ವಿಭಿನ್ನವಾಗಿವೆ.

ಮೊದಲ ಮಹಡಿಯಲ್ಲಿ ತೇನ್‌ಸಿಂಗ್ ಹಾಗೂ ಎಡ್ಮಂಡ್ ಹಿಲರಿ ಎವರೆಸ್ಟ್ ಶಿಖರವನ್ನು ಏರಿದ ಸಮಯದಲ್ಲಿ ಉಪಯೋಗಿಸಿದ ಎಲ್ಲಾ ಪರಿಕರಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. 1960ನೇ ಇಸವಿಯಲ್ಲಿ ಎವರೆಸ್ಟ್ ಶಿಖರದ 26,000 ಅಡಿ ಎತ್ತರದಲ್ಲಿ ದೊರಕಿದಂತಹ ಅತೀ ದೊಡ್ಡದಾದ ಗಿಡುಗನ ಮೃತ ದೇಹವೊಂದಿದೆ. ಎವರೆಸ್ಟ್ ಅನ್ನು ಏರಿದ ಭಾರತೀಯ ಮತ್ತು ವಿದೇಶಿ ಸಾಹಸಿಗರ ಫೋಟೊಗಳೂ ಇವೆ. ಪಕ್ಕದ ಕಟ್ಟಡದಲ್ಲಿ ಬಗೆ ಬಗೆಯ ಚಿಟ್ಟೆಗಳು ಮತ್ತು ವಲಸೆ ಹಕ್ಕಿಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಇದೊಂದು ಅಪೂರ್ವ ಮತ್ತು ಮರೆಯಲಾಗದ ಮಾಹಿತಿಯ ಕಣಜ.

ಒಟ್ಟಾರೆ ನಾಮ್ಚಿಯಿಂದ ಡಾರ್ಜಿಲಿಂಗ್‌ವರೆಗಿನ ನಮ್ಮ ಪ್ರವಾಸ ನಿಜಕ್ಕೂ ಚೇತೋಹಾರಿಯಾಗಿತ್ತು. ಈ ಪ್ರದೇಶದ ಜನಜೀವನ ಮತ್ತು ಸಂಸ್ಕೃತಿಯ ವೈಶಿಷ್ಟ್ಯ ಸದಾ ನೆನಪಿನಲ್ಲಿ ಉಳಿಯುವಂತಿದೆ.